ದಿನಾಂಕ 01-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸ ವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಎಮ್ ಹೆಚ್ ರವರಿಂದಃ**

ನಾನು 2001 ರಲ್ಲಿ ಖರೀದಿಸಿದ ಸರ್ವೆ ನಂಬರ 1/1 ರಲ್ಲಿ ಒಟ್ಟು ಕ್ಷೇತ್ರ 2 ಎಕರೆ 1 ಗುಂಟೆ ಇದೆ . ಆದರೆ ವಾದ ಪತ್ರದಲ್ಲಿ 1 ಎಕರೆ 11 ಗುಂಟೆ 4 ಅಣೆ ಎಂದು ಕಾಣಿಸಿದ್ದಿರಾ ಎಂದರೆ ಸರಿ. ನಾನು 1 ಎಕರೆ 11 ಗುಂಟೆ 4 ಅಣೆಯನ್ನು ಶರಾವತಿ ಸೀತಾರಾಮ ಹೆಗಡೆ ರವರಿಂದ ಖೀರಿದಿಸಿದ್ದೇನೆ . ಶರಾವತಿ ಸೀತಾರಾಮ ಹೆಗಡೆರವರಿಗೆ ಯಾರಿಂದ ಬಂದಿದೆ ಎಂದು ನನಗೆ ಗೊತ್ತಿಲ್ಲ . ಆ ಬಗ್ಗೆ ನೀವು ವಿಚಾರಿಸಿದ್ದಿರಾ ಎಂದರೆ ಸಾಕ್ಷಿಯು ಅವರಿಗೆ ಹಕ್ಕು ಇದೆ ಎಂದು ಗೊತ್ತಿದೆ ಯಾರಿಂದ ಬಂದಿದೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ . ಇದು ಶರಾವತಿಯ ತವರು ಮನೆಯ ಆಸ್ತಿಯಾಗಿರುತ್ತದೆ . ಶರಾವತಿಯವರ ತಂದೆ ನಾರಾಯಣ ಕೃಷ್ಣಪ್ಪ ಹೆಗಡೆ . ನಾರಾಯಣ ಕೃಷ್ಣಪ್ಪ ಹೆಗಡೆ ರವರಿಗೆ ಎರಡು ಜನ ಹೆಣ್ಣು ಮಕ್ಕಳು . ಅನುಸೂಯಾ ಹಾಗೂ ಶರಾವತಿ . ನಾರಾಯಣ ಕೃಷ್ಣಪ್ಪ ಹೆಗಡೆ ರವರು ಶರಾವತಿಯನ್ನು ಇಟಗುಳಿ ಗ್ರಾಮದಲ್ಲಿ ಸೀತಾರಾಮ ಹೆಗಡೆರವರಿಗೆ ಲಗ್ನ ಮಾಡಿಕೊಟ್ಟಿರುತ್ತಾರೆ . ಅನುಸೂಯಾಳಿಗೆ ಹುಳಗೋಳಗ್ರಾಮದ ಹಕ್ಕಿಮನೆಯ ಗಣಪತಿ ಹೆಗಡೆರವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ . ಸರ್ವೆ ನಂಬರ 1/1 ಕ್ಷೇತ್ರ 1-11-04 ಅಣೆಯನ್ನು ಖರೀದಿ ಮಾಡಬೇಕದರೆ ನಾರಾಯಣ ಹೆಗಡೆರವರು ಜೀವಂತ ಇರಲಿಲ್ಲ . ಅವರು ತೀರಿಹೋದ ನಂತರ ಸರಳ ವಾರಸುದಾರರು ಎಂದರೆ ಶರಾವತಿ ಹಾಗೂ ಅನುಸೂಯಾ ಹಕ್ಕು ದಾರರು ಎಂದರೆ ಸರಿ . ಈಗ ಶರಾವತಿ ಹಾಗೂ ಅನುಸೂಯಾ ಜೀವಂತ ಇಲ್ಲ . 2001 ರಲ್ಲಿ ಖರೀದಿಸುವಾಗ ಅನುಸೂಯಾ ಜೀವಂತ ಇದ್ದಳು ಎಂಬ ಬಗ್ಗೆ ನನಗೆ ಗೊತ್ತಿಲ್ಲ . ನಾರಾಯಣ ಹೆಗಡೆ ರವರು 1970-80 ರಲ್ಲಿ ತೀರಿಹೋಗಿದ್ದಾರೆ . ಶರಾವತಿಗೆ ನಾರಾಯಣ , ದಿವಾಕರ ಹಾಗೂ ರಮಕಾಂತ ಎಂಬ ಮೂರು ಗಂಡುಮಕ್ಕಳು ಎಂದರೆ ಸರಿ . 2001 ರಲ್ಲಿ ಅವರು ಪ್ರಾಯಸ್ಥರಾಗಿರಬಹುದು . 2001 ರಲ್ಲಿ ಖರೀದಿಸುವ ವೇಳೆಯಲ್ಲಿ ಅನುಸೂಯಾ

ನಾರಾಯಣ, ದಿವಾಕರ ಹಾಗೂ ರಮಾಕಾಂತರವರ ಸಹಿ ಪಡೆದುಕೊಂಡಿದ್ದಿರಾ ಎಂದರೆ ಈಗ ನನಗೆ ನೆನಪಿಲ್ಲ . ನಾನು ಖರೀದಿಸಿದ ಜಮೀನಿನ ಖರೀದಿಪತ್ರ ಹಾಜರುಪಡಿಸಿಲ್ಲ . ಸಾಕ್ಷಿಯು ಮುಂದುವರೆದುಅ ವಶ್ಯವಿದ್ದರೆ ಹಾಜರುಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ . ಅನುಸೂಯಾ ಹಾಗೂ ಶರಾವತಿಯವರ ಮಧ್ಯೆ ಹಿಸ್ಸೆ ಆಗಿತ್ತು ಇಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ . ಆದರೆ 2001 ರಲ್ಲಿ ಅವರ ಮಧ್ಯೆ ಹಿಸ್ಸೆ ದಾವೆ ನಡೆಯುತ್ತಿತ್ತು ಎಂದರೆ ಸಾಕ್ಷಿಯು ಅದು ಅವರು ರಾಜೀ ಮಾಡಿಕೊಂಡ ನಂತರ ಖರಿದಿಸಿದ್ದೇನೆ . ರಾಜೀಯಾದ ಬಗ್ಗೆ ನನ್ನ ಹತ್ತಿರ ಕಾಗದ ಪತ್ರ ಇಲ್ಲ . 2001 ರಲ್ಲಿ ನಾರಾಯಣ , ದಿವಾಕರ , ರಮಾಕಾಂತ ಹಾಗೂ ಶರಾವತಿಯವರು ಒಟ್ಟಿಗೆ ಇದ್ದರು. ಈಗ ಅವರ ಮಧ್ಯೆ ಹಿಸ್ಸೆ ಆಗಿರುತ್ತದೆ. 2006 ರಲ್ಲಿ ಸರ್ವೆ ನಂಬರ 1/1 ರಲ್ಲಿ 2 ಎಕರೆ 1 ಗುಂಟೆ ಜಾಗವನ್ನು ಅದರಲ್ಲಿ ನೀವು ಖರಿದಿಸಿದ್ದು 1-11-04 ಅಣೆ ಪೈಕಿ 2 ಗುಂಟೆ 08 ಅಣೆಯನ್ನು ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಿರಿ ಎಂದರೆ ಸರಿ . ಈ ರೀತಿ ಮಾರಾಟ ಆದ ನಂತರ ಸರ್ವೆ ನಂಬರ 1/1 ರಲ್ಲಿ ಪೋಟ ಹಿಸ್ಸಾ ಪ್ರಕರಣದಲ್ಲಿ ನಾಲ್ಕು ಪೋಟ ಹಿಸ್ಸಾಗಳು ಆದವು ಎಂದರೆ ಸರಿ. ಅಂದರೆ ಸರ್ವೆ ನಂಬರ 1/1 ರಲ್ಲಿ 1/1, 1/28, 1/29 ಹಾಗೂ 1/30 ಪೋಟ ಹಿಸ್ಸಾ ಆಗಿತ್ತು ಎಂದರೆ ಸರಿ. ಈ ರೀತಿ ಪೋಟ ಹಿಸ್ಸಾ ಆಗಬೇಕಾದರೆ ಶರಾವತಿ ಜೀವಂತ ಇದ್ದ ಬಗ್ಗೆ ಗೊತ್ತಿಲ್ಲ . ಪೋಟ ಹಿಸ್ಸಾ ಆಗಬೇಕಾದರೆ ಸರ್ವೆ ನಂಬರ 1/1 ರಲ್ಲಿ 14 ಗುಂಟೆ ಜಾಗ ರಮಾಕಾಂತ ಸೀತಾರಾಮ ಹೆಗಡೆರವರಿಗೆ ಹೋಯಿತು ಎಂದರೆ ಸರಿ . ಸರ್ವೆ ನಂಬರ 1/28 ರಲ್ಲಿ 1-17-12 ಅಣೆ ನಿಮಗೆ ಬಂತು ಎಂದರೆ ಸರಿ . ಸರ್ವೆ ನಂಬರ 1/29 ರಲ್ಲಿ 0-2-8 ಅಣೆ ಪ್ರತಿವಾದಿಯವರಿಗೆ ಬಂತು ಎಂದರೆ ಸರಿ . ಸರ್ವೆ ನಂಬರ 1/30 ರಲ್ಲಿ 0-15-12 ಅಣೆ ರಮಾಕಾಂತ ಸೀತಾರಮ ಹೆಗಡೆರವರಿಗೆ ಬಂತು ಎಂದರೆ ಸರಿ . ಅಂದರೆ 1/1 ಹಾಗೂ 1/30 ರಮಾಕಾಂತ ಸೀತಾರಾಮ ಹೆಗಡೆರವರಿಗೆ ಬಂತು ಎಂದರೆ ಸರಿ . ಈ ರೀತಿ ಪೋಟ ಹಿಸ್ಸಾ ಅಗಬೇಕಾದರೆ ತಕರಾರು ಇತ್ತಾ ಎಂದರೆ ಇತ್ತು ಎಂದರೆ ಉತ್ತರಿಸುತ್ತಾರೆ . ಸಾಕ್ಷಿಯು ನಾವು ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ . ಅದು 2009-10 ರಲ್ಲಿ ನಿಖಾಲಿಯಾಗಿರುತ್ತದೆ . ಈ ರೀತಿ ನಿಖಾಲಿಯಾದ ನಂತರ ಸರ್ವೆ ನಂಬರ 1/1 ರಲ್ಲಿ 14 ಗುಂಟೆ ಜಾಗ ರಮಾಕಾಂತ ಸೀತಾರಾಮ ಹೆಗಡೆರವರಿಗೆ, ಸರ್ವೆ ನಂಬರ 1/28 ರಲ್ಲಿ

1-17-12 ಅಣೆ ನಿಮಗೆ , ಸರ್ವೆ ನಂಬರ 1/29 ರಲ್ಲಿ 0-2-8 ಅಣೆ ಪ್ರತಿವಾದಿಯವರಿಗೆ, ಸರ್ವೆ ನಂಬರ 1/30 ರಲ್ಲಿ 0-15-12 ಅಣೆ ರಮಾಕಾಂತ ಸೀತಾರಾಮ ಹೆಗಡೆರವರಿಗೆ ಬಂತು ಎಂದರೆ ಸರಿ . ಅದೇ ರೀತಿ ಇವತ್ತಿನವರೆಗೂ ಅದು ಅಮಲನಲ್ಲಿದೆ . ಅಂದರೆ ನಾನು ಖರಿದಿ ಮಾಡಿದ 1-11-04 ಅಣೆಯು ಸರ್ವೆ ನಂಬರ 1/28 ಆಯಿತು ಎಂದರೆ ಸರಿ . ಈ ರೀತಿ ಪೋಟ ಹಿಸ್ಸಾ ಮಾಡಬೇಕಾದರೆ ನೀವು ಖರೀದಿಸಿದ 1-11-04 ಅಣೆಯು ಸರ್ವೆ ನಂಬರ 1/28 ಆಗಬೇಕಾದರೆ 1-17-12 ಅಣೆ ಆಯಿತು ಎಂದರೆ ಸಾಕ್ಷಿಯು ಹಾಗೇ ಆಗಲಿಕ್ಕಿಲ್ಲ ಎಂದು ಉತ್ತರಿಸುತ್ತಾರೆ . ಪೋಟ ಹಿಸ್ಸಾ ನಕಾಶೆಯನ್ನು ನಾನು ಹಾಜರುಪಡಿಸಿರುತ್ತೇನೆ . 2006 ರಲ್ಲಿ ಆದಂತಹ ಪೋಟ ಹಿಸ್ಸಾ ನಕಾಶೆಯನ್ನು ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು 2010 ರಲ್ಲಿ ಆಗಿತ್ತು ಎಂದು ಉತ್ತರಿಸುತ್ತಾರೆ . ಪ್ರತಿವಾದಿ ಪರ ವಕೀಲರು ಸಾಕ್ಷಿಗೆ 2006 ರಲ್ಲಿ ಆದಂತಹ ಹಿಸ್ಸಾ ಪೋಟ ನಕಾಶೆಯನ್ನು ತೋರಿಸಲಾಗಿ ಇದೇ ನಕಾಶಗೋಸ್ಕರ ತಕರಾರು ಆಗಿ ಮೇಲ್ಮನವಿ ಸಲ್ಲಿಸಿದ ಬಗ್ಗೆ ಪ್ರಶ್ನೆ ಕೇಳಿದಾಗ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ . ಸದ್ರಿ ನೋಟರಿಕೃತ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ .ಡಿ-1 ಎಂದು ಗುರುತಿಸಲಾಯಿತು. ಈ ರೀತಿ 2006 ರಲ್ಲಿ ಆದಂತಹ ಪೋಟ ಹಿಸ್ಸಾ ನಕಾಶೆಯಂತೆ ನಿಮಗೆ ಸರ್ವೆ ನಂಬರ 1/28 ರಲ್ಲಿ ಮಾತ್ರ ಹಕ್ಕು ಇದೆ . ಸರ್ವೆ ನಂಬರ 1/1 , 1/29 ಹಾಗೂ 1/30 ರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ . ನೀವು ಹಾಜರುಪಡಿಸಿದ ನಿ.ಪಿ-2 ರಲ್ಲಿ ಸರ್ವೆ ನಂಬರ 1/28, 1/29 ಹಾಗೂ 1/30 ಎಲ್ಲಿ ಬರುತ್ತದೆ ಎಂದು ಕಾಣಿಸುವುದಿಲ್ಲ ಎಂದರೆ ಸರಿ . 2010 ರಲ್ಲಿ ಸರ್ವೆ ನಂಬರ 1/1 ರಲ್ಲಿ ನಿಮಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿ . ನಿ.ಪಿ-2 ನಕ್ಷೆ ಆಧಾರದ ಮೇಲೆನೆ ದಾವೆ ಹೂಡಿದ್ದಿರಾ ಎಂದರೆ ಸರಿ . ನಿ.ಪಿ-2 ರಲ್ಲಿ ಕೆಂಪು ಬರಹದಿಂದ ಕಾಣಿಸಿದ 8 ಗುಂಟೆ ಅತೀಕ್ರಮ ಕ್ಷೇತ್ರವು ಸರ್ವೆ ನಂಬರ 1/28 ರಲ್ಲಿ ಬರುತ್ತದೆ ಎಂದು ಕಾಣಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ನಿ.ಪಿ-2 ರಲ್ಲಿ ಕಾಣಿಸಿಲ್ಲ ಆದರೆ ಸರ್ವೆ ನಂಬರ 1/28 ರಲ್ಲಿ ಬರುತ್ತದೆ ಎಂದು ಉತ್ತರಿಸುತ್ತಾರೆ . ನಿ.ಪಿ-2 ನಕಾಶೆಯನ್ನು 2012 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ರದ್ದುಗೊಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಿ.ಪಿ-2 ನ್ನು ರದ್ದು ಗೊಳಿಸಿ 2006 ರಲ್ಲಿ ಆದಂತಹ ನಕ್ಷೆಯನ್ನು

ಊರ್ಜಿತಗೊಳಿಸಿದರು ಎಂದರೆ ನನಗೆ ಗೊತ್ತಿಲ್ಲ . ರಮಾಕಾಂತ ಸೀತಾರಾಮ ಹೆಗಡೆ ರವರು ನನಗೆ ಯಾವುದೆ ಕಾಗದ ಪತ್ರ ಮಾಡಿಕೊಟ್ಟಿಲ್ಲ .

2. ಪ್ರತಿವಾದಿಯವರು ನಿಮ್ಮಿಂದ ಖರಿದಿಸಿದ 2 ಗುಂಟೆ 8 ಅಣೆಯು ನೋಂದ ಆಗಿರುತ್ತದೆ ಎಂದರೆ ಸರಿ . ಸಾಕ್ಷಿಗೆ ಷದ್ರಿ ದಾಖಲೆಯ ನಕಲು ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿರುವುದರಿಂದ ಅದನ್ನು ನಿ .ಡಿ-2 ಎಂದು ಗುರುತಿಸಲಾಯಿತು. ಷದ್ರಿ ದಸ್ತಾವೈಜ ಮಾಡಬೇಕಾದರೆ ಅವರ ಮನೆ ಸರ್ವೆ ನಂಬರ 220 ರಲ್ಲಿ ಬರುತ್ತಿದ್ದು , ಅವರ ಮನೆಯ ಮುಂದಿನ ಅಂಗಳ ಸರ್ವೆ ನಂಬರ 1/1 ರಲ್ಲಿ ಬರುತ್ತಿದ್ದ ಕಾರಣ ನೀವು ಖರಿದಿಗೆ ನೀಡಿದ್ದಿರಾ ಎಂದರೆ ಸರಿ . ಬೊಮ್ಮನಳ್ಳಿ ಗ್ರಾಮದ ಸರ್ವೆ ನಂಬರ 220 ಇದು ಬೆಟ್ಟಾ ಜಮೀನು . ಸರ್ವೆ ನಂಬರ 220 ರಲ್ಲಿ ರಮಾಕಾಂತ ರವರ ಮನೆ ಅನಾದಿಕಾದಿಂದ ಇತ್ತು ಎಂದರೆ ಸರಿ . ಆ ಮನೆ ಇನ್ನೂ ಅಸ್ಥಿತ್ವದಲ್ಲಿ ಇದೆ ಎಂದರೆ ಸರಿ . ಈ ಮನೆಯ ಉತ್ತರಿ ದಿಕ್ಕಿನಲ್ಲಿ ಕೊಟ್ಟಿಗೆ ಮತ್ತು ಬಚ್ಚಲು ಮನೆ ಇದೆ ಎಂದರೆ ಸರಿ . ಅದನ್ನು ಹೊಸದಾಗಿ ಕಟ್ಟಿಸಲು ಪ್ರಾರಂಭಿಸಿದಾಗ ನಾನು ಈ ಪ್ರಸ್ತುತ ದಾವೆಯನ್ನು ಹೂಡಿದ್ದೇನೆ . ಷದ್ರಿ ಕೊಟ್ಟಿಗೆ ಹಾಗೂ ಬಚ್ಚಲು ಮನೆಯು ಸರ್ವೆ ನಂಬರ 220 ರಲ್ಲ್ ಬರುತ್ತದೆ ವಿನಃ ಸರ್ವೆ ನಂಬರ 1/28 ರಲ್ಲಿ ಬರುವುದಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂಬರ 1/28 ರಲ್ಲಿ ಬರುತ್ತದೆ ಎಂದು ಉತ್ತರಿಸುತ್ತಾರೆ . ಅದು ಸರ್ವೆ ನಂಬರ 1/28 ರಲ್ಲಿ ಬರುತ್ತದೆ ಎಂದು ಮೌಕಿಕ ಹೇಳಿಕೆ ಬಿಟ್ಟರೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು 2010 ರಲ್ಲಿ ಆದಂತಹ ಸರ್ವೆ ದಾಖಲೆ ಇದೆ ಎಂದು ಉತ್ತರಿಸುತ್ತಾರೆ .

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಲಾಯಿತು.)

ಓ.ಹೆ.ಕೆ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಶಿರಸಿ.

ಪಿ.ಡಬ್ಲ್ಯೂ- 1